**ಸಿ.ಸಿ.ನಂ.976/2019**

**ಪಿ.ಡಬ್ಲ್ಯೂ:1**

ದಿನಾಂಕಃ15.03.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಎನ್.ಎಸ್. ವಕೀಲರಿಂದಃ-**

ಆರೋಪಿಯು ಅವರ ತಮ್ಮ ಮುಸ್ತಫನ ಕಡೆಯಿಂದ ಪರಿಚಯ ಆಗಿರುತ್ತಾರೆ. ಆರೋಪಿಯ ಗಂಡನ ಹೆಸರು ನನಗೆ ಗೊತ್ತಿಲ್ಲ. ಆರೋಪಿ ಮನೆಯಲ್ಲಿ ಆರೋಪಿ ಮತ್ತು ಅವರ ಗಂಡ ಇದ್ದಾರೆ, ಅವರ ಮಕ್ಕಳ ಬಗ್ಗೆ ಗೊತ್ತಿಲ್ಲ. ಆರೋಪಿ ಅಡಿಕೆ ಹದ ಮಾಡುವ ಕೂಲಿ ಕೆಲಸ ಮಾಡುತ್ತಾರೆ. ನಾನು 'ಪರ್ಮಿಳ ಫೈನಾನ್ಸ್' ಅನ್ನು ನಡೆಸುತ್ತೇನೆ. ಸದರಿ

ಫೈನಾನ್ಸ್ ನನ್ನ ಹೆಂಡತಿ ಹೆಸರಿನಲ್ಲಿ ಇರುತ್ತದೆ, ನಾನು ಅದನ್ನು ನಡೆಸಲು ವಿಶೇಷ ಅಧಿಕಾರ ಪತ್ರ ಪಡೆದುಕೊಂಡಿರುತ್ತೇನೆ. ನನ್ನ ತಂದೆ ಭವರಲಾಲ್ ಸಹ ಒಂದು ಫೈನಾನ್ಸ್ ನಡೆಸುತ್ತಾರೆ. ಫೈನಾನ್ಸ್ ನಲ್ಲಿ ಸಾಲ ನೀಡಿದಾಗ ಚೆಕ್ ಮತ್ತು ಪ್ರನೋಟನ್ನು ಬರೆಸಿಕೊಳ್ಳುವ ಹವ್ಯಾಸ ಇದೆ ಅಂದರೆ ಸರಿಯಲ್ಲ. ಫೈನಾನ್ಸ್ ನಲ್ಲಿ ಸಾಲ ಕೊಡುವಾಗ ವಾಹನಗಳನ್ನು ಅಡಮಾನ ಮಾಡಿಕೊಳ್ಳುತ್ತೇನೆ. ಆರೋಪಿಯು ಅವರ ಹೆಸರಿನಲ್ಲಿ ಬಲೇರೋ ಪಿಕಪ್ ವಾಹನವನ್ನು ಖರೀದಿಸಿದ್ದರು, ಅದನ್ನು ಬೇರೆ ಫೈನಾನ್ಸ್ ನಿಂದ ಸಾಲ ಪಡೆದು ಖರೀದಿಸಿದ್ದಾರೆ.

ದಿಃ20.09.2018 ರಂದು ಆರೋಪಿಯು ನನ್ನಿಂದ ಸಾಲ ಪಡೆದಿರುತ್ತಾರೆ. ಆರೋಪಿಗೆ ನೀಡಿದ ಹಣಕ್ಕೆ ಬಡ್ಡಿ ಮಾತನಾಡಿರುವುದಿಲ್ಲ. ಆರೋಪಿಗೆ ಹಣವನ್ನು ನಗದಾಗಿ ನೀಡಿರುತ್ತೇನೆ. ಆರೋಪಿಗೆ ಹಣ ನೀಡಿದ ದಿನವೇ ನನಗೆ ನಿಸಿ-1 ಚೆಕ್ಕನ್ನು ನೀಡಿ ಅದರಲ್ಲಿ ದಿಃ27.09.2018 ಎಂದು ದಿನಾಂಕ ನಮೂದಿಸಿರುತ್ತಾರೆ. ಬ್ಯಾಂಕಿನಿಂದ ಹಣ ಡ್ರಾ ಮಾಡಿಕೊಳ್ಳಿ ಎಂದು ನಿಸಿ-1 ಚೆಕ್ಕನ್ನು ನೀಡಿರುತ್ತಾರೆ. ಚೆಕ್ಕನ್ನು ದಿಃ01.10.2018 ರಂದು ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ನಿಸಿ-1 ಚೆಕ್ಕು ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಅಮಾನ್ಯಗೊಂಡಿಲ್ಲ ಬದಲಾಗಿ ಸಹಿ ವ್ಯತ್ಯಾಸವಿದೆ ಎಂದು ಹಿಂದಿರುಗಿಸಲ್ಪಟ್ಟಿದೆ ಅಂದರೆ ಸರಿ. ನಿಸಿ-1 ಚೆಕ್ಕು ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂದಿರುಗಿಸಲ್ಪಟ್ಟಿದೆ ಎಂದು ಪ್ರಮಾಣಪತ್ರದಲ್ಲಿ ತಪ್ಪಾಗಿ ತಿಳಿಸಿದ್ದೇನೆ ಅಂದರೆ ಸರಿ. ನಿಸಿ-1(ಎ) ಸಹಿ ಆರೋಪಿಯದ್ದಲ್ಲ ಅಂದರೆ ಸರಿಯಲ್ಲ. ನಿಸಿ-1 ಚೆಕ್ಕಿನಲ್ಲಿರುವ ಬರವಣಿಗೆಗಳು ಆರೋಪಿಯದಲ್ಲ ಅಂದರೆ ಸರಿಯಲ್ಲ.

ಆರೋಪಿಗೆ ಹಣ ನೀಡಿದ ದಿನ ಆರೋಪಿಯಿಂದ ಯಾವುದೇ ಬರವಣಿಗೆ ಮಾಡಿಸಿಕೊಂಡಿರುವುದಿಲ್ಲ. ಆರೋಪಿ ನನ್ನಿಂದ ಯಾವುದೇ ಹಣ ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ನಿಸಿ-1 ಚೆಕ್ಕನ್ನು ಆರೋಪಿ ನನಗೆ ನೀಡಿಲ್ಲ ಅಂದರೆ ಸರಿಯಲ್ಲ. ಆರೋಪಿ ಯಾರು ಎಂದು ನನಗೆ ಗೊತ್ತಿಲ್ಲದಿದ್ದರೂ ಸಹ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ. ನಿಸಿ-3 ನೋಟೀಸು ನಿಸಿ-5 ರಂತೆ ಆರೋಪಿಗೆ ಜಾರಿಯಾಗಿಲ್ಲ ಅಂದರೆ ಸರಿಯಲ್ಲ. ನಿಸಿ-5 ರಲ್ಲಿ ಇರುವ ಸಹಿ ಆಂಗ್ಲ ಭಾಷೆಯಲ್ಲಿ ಇದೆ ಅಂದರೆ ಸರಿ.

**ಸಿ.ಸಿ.ನಂ.976/2019**

**ಪಿ.ಡಬ್ಲ್ಯು:1**

ನಿಸಿ-1 ಚಕ್ಕಿನಲ್ಲಿ ಸಹಿ ಕನ್ನಡದಲ್ಲಿ ಇದೆ ಅಂದರೆ ಸರಿ. ಆರೋಪಿ ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತಾರೆ. ಆರೋಪಿಯು ನನ್ನಿಂದ ಯಾವುದೇ ಸಾಲ ಪಡೆದಿಲ್ಲ ಅಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಲಾಭ ಹೊಂದುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರ:ದ:ನ್ಯಾ:ದಂ.,ರವರು, ಕಡೂರು.